2) ವರದಿಗಳನ್ನೊಪ್ಪಿಸುವುದು

ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) (ಅಧ್ಯಕ್ಷರು, ಅಧೀನ ಶಾಸನ ರಚನಾ ಸಮಿತಿ) :- ಮಾನ್ಯ ಅಧ್ಯಕ್ಷರೇ, 2002-03ನೇ ಸಾಲಿನ ಅಧೀನ ಶಾಸನ ರಚನಾ ಸಮಿತಿಯ ಇಪ್ಪತ್ತೊಂಭತ್ತನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

(ಗೊಂದಲ)

ಅಧ್ಯಕ್ಷರು : ಮಾನ್ಯ ಡಿ.ಆರ್. ಪಾಟೀಲ್, ಅಧ್ಯಕ್ಷರು, ಸರ್ಕಾರಿ ಭರವಸೆಗಳ ಸಮಿತಿ ಪರವಾಗಿ 2002-03ನೇ ಸಾಲಿನ ಸರ್ಕಾರಿ ಭರವಸೆಗಳ ಸಮಿತಿಯ ಎಂಟನೇ ವರದಿಯನ್ನು ಸದನಕ್ಕೆ ನಾನೇ ಒಪ್ಪಿಸುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ತಾವು ವಿತ್ತೀಯ ಕಾರ್ಯಕಲಾಪಗಳ ಮೇಲೆ ಈಗ ಮಾತನಾಡಿ.

(ಗೊಂದಲ)

3) ಭರತೀಯ ಜನತಾ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ

(ಗೊಂದಲ)

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೇ, ಬಹುಶಃ ನಮ್ಮ ಭಾರತೀಯ ಜನತಾ ಪಕ್ಷದ ಸಹದ್ಯೋಗಿಗಳಿಗೆ .....

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, xxx ಇತ್ಯಾದಿ ಪದಗಳೆಲ್ಲಾ ಕಡತಕ್ಕೆ ಹೋಗುವುದಾದರೆ I am very sorry. ಇವರ ಯಾರ ಏಜೆಂಟರು ?

(ಗೊಂದಲ)

ಅಧ್ಯಕ್ಷರು : ಅದು ಯಾವುದೂ ಕಡತಕ್ಕೆ ಹೋಗಿಲ್ಲ, ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ, ನೀವೂ ಮಾತನಾಡಿದ್ದೀರಿ. ಅದಕ್ಕೆ ಅವರೂ ಉತ್ತರ ಹೇಳಿದ್ದಾರೆ. That subject is over now.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ..... ದೇಶದಲ್ಲಿ ವಿಚ್ಛಿದ್ರಕಾರಿ ಶಕ್ತಿಯನ್ನು ಬೆಳೆಸುವಂತಹ ಕೆಲಸವನ್ನು .....

Mr. Speaker : Don't take down.

(ಗೊಂದಲ)

(ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ನಡವಳಿಕೆಗಳನ್ನು ದಾಖಲು ಮಾಡಲಿಲ್ಲ)

ಅಧ್ಯಕ್ಷರು : ಅವರೂ ಹೇಳಿದ್ದಾರೆ, ತಾವೂ ಹೇಳಿದ್ದೀರಿ. ತಾವು ಪ್ರಸ್ತಾಪಿಸಿದ್ದಕ್ಕೆ ಅವರು ಉತ್ತರ ಹೇಳಿದ್ದಾರೆ. ಇದರಲ್ಲಿ ಇನ್ನೇನಿದೆ ? Come on tell me.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ..... ತೊಗಾಡಿಯಾ ಅವರು ಸಾಕಷ್ಟು ಬಾರಿ ಕರ್ನಾಟಕಕ್ಕೆ ಬಂದಿದ್ದಾರೆ. ಯಾವುದೇ ಅಹಿತಕರ ಘಟನೆಗಳಾಗಿಲ್ಲ. ಅವರು ಯಾವುದೇ ಪ್ರಚೋದನಾಕಾರಿ ಭಾಷಣಗಳನ್ನು ಮಾಡಿಲ್ಲ .....

---

xxx ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

(ಗೊಂದಲ)

ಅಧ್ಯಕ್ಷರು : ಇವತ್ತಿನ ಕಾರ್ಯಕ್ರಮಗಳಿಗೆ ನೀವು ಅಡ್ಡಿ ಪಡಿಸುತ್ತಿದ್ದೀರಿ. ವಿತ್ತೀಯ ಕಾರ್ಯಕಲಾಪಗಳ ಮೇಲೆ ಮಾತನಾಡುವವರು ಬೇಕಾದಷ್ಟು ಜನ ಸದನದಲ್ಲಿದ್ದಾರೆ. ತಾವು ಪ್ರಸ್ತಾಪ ಮಾಡಿದಿರಿ. ಅದಕ್ಕೆ ಅವರು ಉತ್ತರವನ್ನು ಹೇಳಿದ್ದಾರೆ. ಇದರಲ್ಲಿ ಇನ್ನೇನಿದೆ ?

(ಗೊಂದಲ)

ಅಧ್ಯಕ್ಷರು : ಕಾನೂನು ಪ್ರಕಾರ ಅವರು ಕ್ರಮವನ್ನು ಕೈಗೊಳ್ಳುತ್ತಾರೆ. ತಾವುಗಳು ತಮ್ಮ ತಮ್ಮ ಜಾಗಗಳಿಗೆ ಹೋಗುತ್ತೀರೋ ಇಲ್ಲವೋ ?

(ಗೊಂದಲ)

ಅಧ್ಯಕ್ಷರು : ನಿಮ್ಮಿಂದ ಇವತ್ತಿನ ಕಾರ್ಯಕಲಾಪಗಳಿಗೆ ಇದೇ ರೀತಿ ಆಡಚಣೆ ಆಗುತ್ತಿದ್ದರೆ ನಾನು ಸದನವನ್ನು ಸೋಮವಾರಕ್ಕೆ adjourn ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಯಾರು ಮಾತನಾಡಬೇಡಿ. ಮಾನ್ಯ ಶೆಟ್ಟರ್‌ರವರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಆದಕ್ಕೆ ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ಆಮೇಲೆ ಮಾನ್ಯ ಸದಾನಂದಗೌಡರೂ ಸಹ ಒಂದು ನಿಮಿಷ ಮಾತನಾಡಿದ್ದಾರೆ. ಇನ್ನೇನಿದೆ ? Come on, tell me.

(ಗೊಂದಲ)

ಅಧ್ಯಕ್ಷರು : ಇವತ್ತು ಮಾತನಾಡುವವರು ಬೇಕಾದಷ್ಟು ಜನ ಇದ್ದಾರೆ. ನೀವು ಅಂದರೆ 35 ಜನ, ಸದನದ ಕಲಾಪಗಳಿಗೆ ಅಡಚಣೆ ಮಾಡುವುದು ಸಾಧ್ಯವಿಲ್ಲ. ಮಾನ್ಯ ಸದಸ್ಯರುಗಳಿಗೆ ಮಾತನಾಡಲು ಹಕ್ಕಿದೆ. ಇವತ್ತು ವಿತ್ತೀಯ ಕಾರ್ಯಕಲಾಪಗಳ ಮೇಲೆ ಮಾನ್ಯ ಸದಸ್ಯರುಗಳು ಮಾತನಾಡಲಿಕ್ಕೆ ದಯವಿಟ್ಟು ನೀವು ಅಲೋ ಮಾಡಬೇಕು. ನೀವು ಮಾತನಾಡುವುದಿದ್ದರೆ, ಮಾತನಾಡಿ. ಅವರು ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : xxx

Mr. Speaker : Don't take down. ಅವರು ಏನು ಬೇಕಾದರೂ ಮಾತನಾಡಿಕೊಳ್ಳಲಿ.

(ಗೊಂದಲ)

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ನಡವಳಿಕೆಗಳನ್ನು ದಾಖಲಿಸಿಕೊಳ್ಳಲಿಲ್ಲ)

ಅಧ್ಯಕ್ಷರು : ಒಬ್ಬೊಬ್ಬರು ಮಾತನಾಡಿ. ನಿಮ್ಮ ನಾಯಕರು ಅಲ್ಲಿ ನಿಂತುಕೊಂಡು ಮಾತನಾಡುತ್ತಿರುವಾಗ ನೀವೇಕೆ ಮಾತನಾಡುತ್ತೀರಿ ? ನಿಮ್ಮ ನಾಯಕರಿಗೆ ಗೌರವ ಇಲ್ಲವೇ ? ಅವರು ಮಾತನಾಡುತ್ತಿರುವಾಗ ನೀವು ಸುಮ್ಮನಿರಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಎಲ್ಲರೂ ಇದೇ ರೀತಿಯಲ್ಲಿ ಇಲ್ಲಿ ಧರಣಿಯನ್ನೂ ಮಾಡುವುದು ಮತ್ತು ಅಲ್ಲಿ ಮಾತನಾಡುವುದೂ ಮಾಡುವುದಾದರೆ, ಇದು ಅನ್ಯಾಯ.

ಅಧ್ಯಕ್ಷರು : ಹೌಸ್ ಅನ್ನು adjourn ಮಾಡೋಣ ಬಿಡಿ.

(ಗೊಂದಲ)

---

xxx ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ..... ವಿಶ್ವ ಹಿಂದೂ ಪರಿಷತ್ ದೇಶವನ್ನು ಮತ್ತು ಸಮಾಜವನ್ನು ಕಟ್ಟುವಂತಹ ಕೆಲಸ ಮಾಡುತ್ತಿದೆ .....

ಅಧ್ಯಕ್ಷರು : ತಾವು ಆಗಲೇ ವಿಷಯವನ್ನು ಪ್ರಸ್ತಾಪ ಮಾಡಿ ಆಯಿತಲ್ಲಾ, ಇನ್ನೇನು ?

(ಗೊಂದಲ)

ಅಧ್ಯಕ್ಷರು : ಎಲ್ಲರೂ ತಮ್ಮ ತಮ್ಮ ಜಾಗಗಳಿಗೆ ಹೋಗುತ್ತೀರೋ ಇಲ್ಲವೋ ?

(ಗೊಂದಲ)

Mr. Speaker : Again we are meeting at 11.30 a.m. ಮತ್ತೆ 11.30 ಗಂಟೆಗೆ ಸದನ ಪುನಃ ಸಮಾವೇಶಗೊಳ್ಳಲಿದೆ.

(ಸದನವನ್ನು ಬೆಳಿಗ್ಗೆ 11 ಗಂಟೆ 6 ನಿಮಿಷಗಳಿಗೆ ಮುಂದೂಡಲ್ಪಟ್ಟು ಪುನಃ 11.30 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು ಪುನಃ ಮಧ್ಯಾಹ್ನ 12-00 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ವಿಷಯ : ಶ್ರೀ ಪ್ರವೀಣ್ ಭಾಯಿ ತೋಗಾಡಿಯಾರವರಿಗೆ ಬಿಜಾಪುರ ಪ್ರವೇಶಕ್ಕೆ ನಿರ್ಬಂಧ ವಿಧಿಸಿರುವ ಬಗ್ಗೆ.

(ಬಿ.ಜೆ.ಪಿ. ಸದಸ್ಯರು ಸದನದ ಬಾವಿಯಲ್ಲಿ) (ಮುಂದು)

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಸ್ವಲ್ಪ ಕೇಳಿ, ನಾನು ಮಾತನಾಡುವಾಗ ಯಾರೂ ಮಾತನಾಡಬಾರದು. ನಾನು ಮಾತನಾಡುವಾಗ ಗೌರವ ಕೊಟ್ಟು ಸುಮ್ಮನೆ ಇರಬೇಕು. ನೀವೆಲ್ಲಾ ಇಷ್ಟು ಹೊತ್ತು ಕೂಗಾಡುವಾಗ ನಾನು ಕೇಳಿಸಿಕೊಳ್ಳಲಿಲ್ಲವೇ ? ಸುಮ್ಮನೆ ಇರಿ ಎಂದು ಎಲ್ಲರಿಗೂ ಹೇಳುತ್ತಿದ್ದೇನೆ. ನಾನು ಹೇಳುವುದು ಇಷ್ಟೆ, ಅದೇನೆಂದರೆ ಎಲ್ಲಾ ಪಾರ್ಟಿಗಳ ಸದಸ್ಯರನ್ನು ಮತದಾರರನ್ನು ಏತಕ್ಕೋಸ್ಕರ ಈ ಮನೆಗೆ ಕಳುಹಿಸಿದ್ದಾರೆ, ಅವರ ಹಿತರಕ್ಷಣೆ ಕಾಪಾಡುವುದಕ್ಕೋಸ್ಕರ, ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಿ ಎಂದು ಕಳುಹಿಸಿದ್ದಾರೆ.

(ಗೊಂದಲ)

ಅಧ್ಯಕ್ಷರು : ಈ ರೀತಿ ಕೂಗಾಡುವುದಕ್ಕೆ ಆರಿಸಿ ಕಳುಹಿಸಿದ್ದಾರೆಯೇ ? ಎಲ್ಲಾ ಪಾರ್ಟಿಯವರಿಗೂ ಹೇಳುವುದು ಇಷ್ಟೆ. ಮಾತನಾಡುವುದಿದ್ದರೆ ಒಬ್ಬರು ಮಾತನಾಡಿ. ನಾನು ಮಾತನಾಡಿ ಮುಗಿಸುವವರೆಗೆ ಯಾರೂ ಮಾತನಾಡಬಾರದು.

(ಗೊಂದಲ)

ಅಧ್ಯಕ್ಷರು : ನಾಯ್ಡುಯರವರೇ, ನಾನು ಮಾತನಾಡಿ ಮುಗಿಸುವವರೆಗೆ ನೀವು ದಯವಿಟ್ಟು ಮಾತನಾಡಬೇಡಿ. Please don't talk. I don't allow. ಶೆಟ್ಟರೇ,, ಸುಮ್ಮಿರಿ ಎಂದು ನಿಮ್ಮ ಸದಸ್ಯರಿಗೆ ಹೇಳುತ್ತೀರೋ ಇಲ್ಲವೋ ? ನೀವು ಅಲ್ಲಿ ಮಾತನಾಡುವುದಕ್ಕೆಂದು ನಿಂತಿದ್ದೀರಿ, ಅವರೆಲ್ಲಾ ಸದನದೊಳಗೆ ಗಲಾಟೆ ಮಾಡುತ್ತಿದ್ದಾರೆ. ಹೇಗೆ ? ಅವರಿಗೆ ದಯವಿಟ್ಟು ಹೇಳಿ ಈ ರೀತಿ ಇವತ್ತು ಒಂದು ದಿವಸ ಅಲ್ಲ, ಎಷ್ಟೋ ದಿವಸ ಹೀಗೆ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ಸಮಸ್ಯೆ ಇದ್ದರೆ ಹೇಳಿ, ಹೇಳುವವರೆಗಾದರೂ ಆಲೋ ಮಾಡುವುದಿಲ್ಲ ಎಂದರೆ ಹೇಗೆ ?

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ನಮ್ಮದು ವಿನಂತಿ ಏನೆಂದರೆ, ಒಂದು ಸಂಘಟನೆಯ ಪ್ರಮುಖರು ಸಾರ್ವಜನಿಕ ಸಭೆಯನ್ನು ಮಾಡುವಂಥ ಸಂದರ್ಭದಲ್ಲಿ ಅದಕ್ಕೆ ನಿರ್ಬಂಧ ಹೇರುವಂಥದ್ದು ಸರಿಯಲ್ಲ. ಇದು ಪ್ರಜಾತಂತ್ರದ ಕತ್ತನ್ನು ಹಿಸುಕುವಂಥ ಕೆಲಸ.

(ಗೊಂದಲ)

ಅಧ್ಯಕ್ಷರು : ತಾವು ಹೇಳಿ ಆಗಿದೆಯಲ್ಲಾ. ಪ್ಲೀಸ್ ಸುಮ್ಮಿರಿ. ನಾನು ಮಾತನಾಡಿ ಮುಗಿಸುವವರೆಗೂ ಯಾರೂ ಮಾತನಾಡಬೇಡಿ. ಸದಸ್ಯರು ಯಾವ ಪಾರ್ಟಿಯವರೇ ಆಗಿರಲಿ. ನಾನು ಎಲ್ಲರಿಗೂ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಆ ರೀತಿ ಪ್ರಜಾತಂತ್ರವನ್ನು ಕತ್ತು ಹಿಸುಕುವಂಥ ಕೆಲಸವನ್ನು ಸರ್ಕಾರ ಮಾಡಬಾರದು. .. ಒಬ್ಬ ವ್ಯಕ್ತಿಯನ್ನು, ಇವತ್ತು ಸಾರ್ವಜನಿಕ ಸಭೆಯನ್ನು ಮಾಡುತ್ತಾನೆ, ತಮ್ಮ ವಿಚಾರಗಳನ್ನು ಹೇಳುತ್ತಾನೆಂದು...

(ಗೊಂದಲ)

ಅಧ್ಯಕ್ಷರು : ಆಯಿತಾ, ನೋಡ್ರೀ, ನಾನು ಹೇಳುವವರೆಗೆ ತಡೆಯಿರಿ. ಶೆಟ್ಟರ್‌ರವರೇ, what is this ? ನಾನು ಹೇಳುತ್ತೇನೆ, ಆ ಮೇಲೆ ತಾವು ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ : ರಿಕ್ವೆಸ್ಟ್ ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ ತಾವು ಕುಳಿತುಕೊಳ್ಳಿ.

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಿ. ತಾವು ಏನು ಹೇಳಬೇಕೋ ಎಲ್ಲವನ್ನು ಹೇಳಿದ್ದೀರಿ. ಆ ಪಕ್ಷದ ಲೀಡರ್ ಮಾತನಾಡುವುದಕ್ಕೆ ಕೇಳುತ್ತಿದ್ದಾರೆ. ನೀವು ಹೇಳಿದ್ದನ್ನೂ ಕೇಳಬೇಕು, ಅವರು ಹೇಳಿದ್ದನ್ನೂ ಕೇಳಬೇಕಲ್ಲವೇ ? ಏನಾಗಿದೆ ಎಂಬುದನ್ನು ಆಗಲೇ ನಿಮ್ಮ ವಿರೋಧ ಪಕ್ಷದ ನಾಯಕರು ಹೇಳಿದ್ದಾರಲ್ಲಾ.

(ಗೊಂದಲ)

ಅಧ್ಯಕ್ಷರು : ನಾನು ಹೇಳುವವರೆಗೆ ಸ್ವಲ್ಪ ತಡೆಯಿರಿ. ಆ ಮೇಲೆ I will allow you ಸುಮ್ಮಿರಿ. ಹೇಳ್ರಿ ನಿಮ್ಮ ಸದಸ್ಯರಿಗೆ. ಇದು ಜಾಸ್ತಿ ಆಯಿತು. ಶೆಟ್ಟರೇ, ನೀವು ಮಾತನಾಡುವಾಗ ನಿಮ್ಮ ಸದಸ್ಯರುಗಳು ಏಕೆ ಮಾತನಾಡ ಬೇಕು ?

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ವಿರೋಧ ಪಕ್ಷದ ನಾಯಕರೆ, ಸಭಾಧ್ಯಕ್ಷರು ಏನು ಹೇಳುತ್ತಾರೆ ಅದನ್ನು ಕೇಳೋಣ.

ಅಧ್ಯಕ್ಷರು : ಪಾಟೀಲರೆ, ದಯವಿಟ್ಟು ಕುಳಿತುಕೊಳ್ಳಿ. ನಮ್ಮ ಮುಂದೆ ಇರುವ ಪ್ರಶ್ನೆ ಇಷ್ಟೆ. ಬಿಜಾಪುರದಲ್ಲಿ ಸಿಪಿಎಂ ನವರು ಮತ್ತು ಯಾವಯಾವುದೋ ಬೇರೆ ಪಕ್ಷಗಳು ಲೋಕಲ್ ಸಂಘಗಳವರು ಸೇರಿ, ಅವರು ಏನಾದರೂ ಇಲ್ಲಿಗೆ ಬಂದರೆ ನಾವೆಲ್ಲಾ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ಅದು ಒಂದು ಪ್ರಶ್ನೆ. ಸರ್ಕಾರದ ಕರ್ತವ್ಯ ಏನಿದೆ ಎಂದರೆ ಲಾ ಅಂಡ್ ಆರ್ಡರ್ ಮೈನ್‌ಟೇನ್ ಮಾಡಬೇಕು. ಸಪೋಸ್ ನಾಳೆ ತೊಗಾಡಿಯಾಗೆ ಏನಾದರೂ ಆಯ್ತಪ್ಪ, ಯಾವ ಗ್ರಹಚಾರ, ಆವಾಗ ನೀವು ಏನು ಹೇಳುತ್ತೀರಿ, ಸರ್ಕಾರದವರು ಸರಿಯಾಗಿ ಪ್ರೊಟೆಕ್ಷನ್ ಕೊಡಲಿಲ್ಲ ಎಂದು ಹೇಳುತ್ತೀರಿ ಅಲ್ವಾ ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮುಖ್ಯಮಂತ್ರಿಗಳು ಯಾವುದಾದರೂ ಜಿಲ್ಲೆಗೆ ಬರುತ್ತಾರೆಂದಾಗ ನಾವು ಆತ್ಮಹತ್ಯೆ ಮಾಡಿಕೊಳ್ಳುತ್ತೇವೆಂದು ಯಾರಾದರೂ ಹೇಳಿದರೆ ...

(ಗೊಂದಲ)

ಶ್ರೀ ಕೆ.ಎಂ. ಕೃಷ್ಣಮೂರ್ತಿ : ನಮಗೂ ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : ನಾನು ಹೇಳುವುದು ಇಷ್ಟೆ. ಒಟ್ಟಿನಲ್ಲಿ ನಮ್ಮ ಮನೆ ಕೆಲಸ ಸುಗಮವಾಗಿ ನಡೆಯಬೇಕು. ಇವತ್ತು ಈ ವಿತ್ತೀಯ ಕಾರ್ಯಕಲಾಪದಲ್ಲಿ ಮಾತನಾಡುವವರು ಬಹಳ ಜನ ಇದ್ದಾರೆ.

(ಗೊಂದಲ)

ಅಧ್ಯಕ್ಷರು : ನನ್ನ ಕರ್ತವ್ಯ ಇಷ್ಟೆ. ಈ ಮನೆಯಲ್ಲಿ ನಿಯಮಾವಳಿ ಪ್ರಕಾರ ಎಲ್ಲಾ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಿಕೊಡುವುದು ನನ್ನ ಕರ್ತವ್ಯ. 150 ಜನ ಒಂದು ಕಡೆ ಇರುವಾಗ ನೀವು ಇಲ್ಲಿ 35 ಜನ ನಿಂತು ಡಿಸ್ಟರ್ಬ್ ಮಾಡುವುದು ನ್ಯಾಯವೇ ? ನೀವೇ ಹೇಳಿ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮಾತನ್ನು ಒಪ್ಪುವುದಿಲ್ಲ, ಅಧ್ಯಕ್ಷರೆ, ತಾವೂ ಕೂಡ ತಪ್ಪು ಹೇಳಿಕೆಯನ್ನು ಕೊಡುತ್ತಿದ್ದೀರಿ. ತಮ್ಮ ಮಾತನ್ನು ನಾನು ಒಪ್ಪುವುದಿಲ್ಲ. ತಾವು 150 ಮಂದಿಯಷ್ಟೆ ಎಂದು ಹೇಳುತ್ತಿದ್ದೀರಿ. 150 ಮಂದಿಯಷ್ಟೇ ಎಂದು ಹೇಳುತ್ತೀರಲ್ಲಾ ನಾವೇನೂ ಇಲ್ಲಿ ಕುಳಿತುಕೊಂಡು ಸಪೋರ್ಟ್ ಮಾಡಿಲ್ಲವೇ ? ತಾವೂ ಕೂಡ ಇಂಥ ಹೇಳಿಕೆಯನ್ನು ಕೊಡಬಾರದು. ಬರೇ 150 ಮಂದಿಯಲ್ಲ ಸುಮ್ಮನೆ ಕುಳಿತಿರುವವರು ಇಲ್ಲ.

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಬರೇ 150 ಮಂದಿಯಲ್ಲ. ಬರೇ ಎಂದರೆ ನಾವೆಲ್ಲಾ ಇಲ್ಲೇ ಸದನದಲ್ಲಿ ಕುಳಿತಿದ್ದೇವೆ.

(ಗೊಂದಲ)

ಅಧ್ಯಕ್ಷರು : ತಾವು ನಮ್ಮ ನಾಯಕರು ಮಾತನಾಡಲು ಬಿಡಿ. ನೀವೇಕೆ ಮಧ್ಯದಲ್ಲಿ ಮಾತನಾಡುತ್ತೀರಿ ?

ಶ್ರೀ ಜಗದೀಶ್ ಶೆಟ್ಟರ್ : ಯಾವುದೇ ಸಂಘಟನೆ ಇರಬಹುದು, ಯಾವುದೇ ಧರ್ಮದ ಬಗ್ಗೆ ಇರಬಹುದು, ಅವರು ತಮ್ಮ ಧರ್ಮದ ಬಗ್ಗೆ ಪ್ರಚಾರ ಮಾಡಬಹುದು, ಆ ಧರ್ಮದ ಬಗ್ಗೆ ಹೇಳುವಂಥದ್ದು ಇರಬಹುದು, ಆ ವಿಚಾರಗಳನ್ನು ವ್ಯಕ್ತ ಮಾಡುವಂಥ ಹಕ್ಕು ಪ್ರತಿಯೊಬ್ಬರಿಗೂ ಭಾರತದಲ್ಲಿ ಇದೆ. ಪ್ರಜಾತಂತ್ರದ ಸಂವಿಧಾನದ ಹಕ್ಕನ್ನು ಮೊಟಕುಗೊಳಿಸುವಂಥ ಕೆಲಸ ರಾಜ್ಯ ಸರ್ಕಾರ ಮಾಡುತ್ತಿದೆ. xxx ಈ ರೀತಿ ನಿರ್ಬಂಧವನ್ನು ಹಾಕುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಈ ರೀತಿ ರಾಜ್ಯದಲ್ಲಿ xxx ರಕ್ಷಿಸುವಂಥ ಕೆಲಸ ಮಾಡುತ್ತಿದೆ. ಪ್ರವೀಣ್ ತೊಗಾಡಿಯರವರ ಬಗ್ಗೆ ಹೇಳುವುದಾದರೆ, ಮಂಗಳೂರಿನಲ್ಲಿ ಎರಡು ಲಕ್ಷ ಜನ ಸೇರಿದ್ದರು, ಬೆಳಗಾಂನಲ್ಲಿ ಒಂದು ಲಕ್ಷ ಜನ ಸೇರಿದ್ದರು, ಅಲ್ಲಿ ಯಾವುದೇ ಘಟನೆಯಾಗಿಲ್ಲ.

ಅಧ್ಯಕ್ಷರು : ಅದನ್ನು ಹೇಳಿದ್ದೀರಲ್ಲಾ ?

---

xxx ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಯಾವುದೇ ಪ್ರಚೋದನಾಕಾರಿಯಾದ ಭಾಷಣ ಮಾಡಿಲ್ಲ, ಈ ಪರಿಸ್ಥಿತಿ ಇದ್ದಾಗ ಬಿಜಾಪುರದಲ್ಲಿ ಅವರಿಗೆ ನಿರ್ಬಂಧವನ್ನು ಹೇರುವಂಥ ಅವಶ್ಯಕತೆ ಏನಿತ್ತು ? ಇದು ಪ್ರಜಾತಂತ್ರದ, ಸಂವಿಧಾನದ ವಿರುದ್ಧವಾಗಿ ನಡೆದುಕೊಂಡಂಥದ್ದು ರಾಜ್ಯ ಸರ್ಕಾರ ಮಾಡುತ್ತಿದೆ. ಈ ನಿರ್ಬಂಧವನ್ನು ತೆಗೆದುಹಾಕಬೇಕೆಂಬ ಒತ್ತಾಯವನ್ನು ನಾವು ಮಾಡುತ್ತಿದ್ದೇವೆ. ಅದಕ್ಕೆ ಸರ್ಕಾರ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಈ ನಿರ್ಬಂಧವನ್ನು ನಾವು ತೆಗೆದುಹಾಕುತ್ತೇವೆಂದು ಅವರು ಸ್ಪಷ್ಟವಾಗಿ ಹೇಳಿದಾಗ ನಾವು ಈ ಹೋರಾಟವನ್ನು ಕೈ ಬಿಡುತ್ತೇವೆ. ಅದಕ್ಕಾಗಿ ಸರ್ಕಾರ ಇದರ ಬಗ್ಗೆ ಸ್ಪಷ್ಟವಾಗಿ ತನ್ನ ನೀತಿಯನ್ನು ಪ್ರಕಟ ಮಾಡಬೇಕು.

ಅಧ್ಯಕ್ಷರು : ಸೋಮಶೇಖರ್‌ರವರೆ, ತಾವು ಮಾತನಾಡಿ

(ಗೊಂದಲ)

ಅಧ್ಯಕ್ಷರು : ನೀವು ಇದ್ದಹಾಗೆ ಬೇರೆ ಪಕ್ಷದವರಿದ್ದಾರೆ. I have to allow other party leaders also. ಸೋಮಶೇಖರ್‌ರವರು ಮಾತನಾಡಲಿ.

ಶ್ರೀ ಜಗದೀಶ್ ಶೆಟ್ಟರ್ : ಇವತ್ತು ಅವರು, ಕಾಂಗ್ರೆಸ್‌ನವರು ಆ ರೀತಿ ಪ್ರಚೋದನೆ ಮಾಡುವಂಥದ್ದು, ಸಮಾಜವನ್ನು ಎತ್ತಿಕಟ್ಟುವಂಥದ್ದು ಪ್ರಚೋದನೆ ಮಾಡುವಂಥ ಕೆಲಸವನ್ನು ಮಾಡುತ್ತಿದ್ದಾರೆ. xxx

ಅಧ್ಯಕ್ಷರು : ಅವೆಲ್ಲಾ ಬೇಡ. ಅವರಿಗೂ ಮಾತನಾಡಲು ಅವಕಾಶ ಕೊಡೋಣ. ಬೇರೆ ಪಕ್ಷದವರಿಗೂ ಅವಕಾಶವನ್ನು ಕೊಡೋಣ.

ಶ್ರೀ ಜಗದೀಶ್ ಶೆಟ್ಟರ್ : ಆಗ ಯಾರ ಮೇಲೆ ಆ್ಯಕ್ಷನ್ ತೆಗೆದುಕೊಂಡರು ? ಹೀಗಾಗಿ ಇವರ ಓಟಿನ ರಾಜಕಾರಣದಿಂದ ಅಲ್ಪಸಂಖ್ಯಾತರನ್ನು ಪುಷ್ಟೀಕರಣ ಮಾಡುವಂಥದ್ದನ್ನು ಕಾಂಗ್ರೆಸ್‌ನವರು ಮಾಡುತ್ತಿದ್ದಾರೆ. ಇದನ್ನು ನಾವು ಖಂಡಿಸುತ್ತಿದ್ದೇವೆ. ಈ ನಿರ್ಬಂಧವನ್ನು ಹಾಕಿರುವುದನ್ನು ಪ್ರತಿಭಟಿಸಿ ಖಂಡಿಸುತ್ತಿದ್ದೇವೆ. ಅದಕ್ಕಾಗಿ ಈ ನಿರ್ಬಂಧವನ್ನು ತಕ್ಷಣವೇ ವಾಪಸ್ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇವೆ.

ಅಧ್ಯಕ್ಷರು : ಬೇರೆ ಪಕ್ಷದವರು ಏನು ಹೇಳುತ್ತಾರೋ ನೋಡೋಣ. Let us hear. ಬೇರೆ ಪಕ್ಷದವರು ಮಾತನಾಡಲೇಬಾರದೆ ? ಬರೀ ನೀವೇಯೇ ಇರುವುದು ? ಬೇರೆ ಪಕ್ಷದವರು ಮಾತನಾಡಬಾರದೆ ? I cannot understand. ಸೋಮಶೇಖರ್‌ರವರೆ, ತಾವು ಮಾತನಾಡಿ.

(ಗೊಂದಲ)

ಶ್ರೀ ಬಿ. ಸೋಮಶೇಖರ್ : ಹಾಗಾದರೆ ನಾವು ಮಾತನಾಡುವುದೇ ಬೇಡವೇ ? ಮಾನ್ಯ ಜಗದೀಶ್ ಶೆಟ್ಟರ್‌ರವರೇ, ನಾವೇನು ಮಾತನಾಡುವುದು ಬೇಡವೇ ?

(ಗೊಂದಲ)

ಅಧ್ಯಕ್ಷರು : ತಮ್ಮಂತೆಯೇ ಅವರದ್ದೂ ವಿರೋಧ ಪಕ್ಷ, ಅವರೂ ಮಾತನಾಡಲಿ.

ಶ್ರೀ ಬಿ. ಸೋಮಶೇಖರ್ : ನಾವೇನು ಮಾತನಾಡುವುದು ಬೇಡವೇ ?

(ಗೊಂದಲ)

ಅಧ್ಯಕ್ಷರು : ಸ್ವಲ್ಪ ತಡಿಯಿರಿ, ಮಾನ್ಯ ಮಂತ್ರಿಯವರು ಮಾತನಾಡುತ್ತಾರೆ.

---

xxx ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅಧ್ಯಕ್ಷರು : ಸೋಮಶೇಖರ್‌ರವರು ಮಾತನಾಡಲಿ. ಇದೇನು ಅವತಾರ ? ನಿಮ್ಮ ಈ ರೀತಿ ತಾರತಮ್ಯ ನಮಗೆ ಬೇಕಾಗಿಲ್ಲ. ನಿಮ್ಮ ವಿರೋಧ ಪಕ್ಷದವರಿಗೇ ಮಾತನಾಡಬಾರದೆಂದರೆ ಏನು ಇದು ? ಇದರಲ್ಲೇನು ಅರ್ಥವಿದೆ ? No. No, I don't understand.

(ಗೊಂದಲ)

ಅಧ್ಯಕ್ಷರು : ಸೋಮಶೇಖರ್‌ರವರು ಮಾತನಾಡುತ್ತಾರೆ.

ಶ್ರೀ ಬಿ. ಸೋಮಶೇಖರ್ : ತಾವು ಹೀಗಾದರೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಮಗೆ ಈ ಸದನದಲ್ಲಿ ಮಾತನಾಡಲು ಅವಕಾಶ ಇಲ್ಲವೆಂದರೆ ತಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಬೇರೆ ವಿರೋಧ ಪಕ್ಷದವರು ಮಾತನಾಡಬಾರದೆ ? ಸೋಮಶೇಖರ್‌ರವರು ಮಾತನಾಡಬಾರದೇ ? I don't like this. ನಾನು ಹೇಳುವುದು ಇಷ್ಟೇ. ತಾವು ಈ ರೀತಿ ಗಲಾಟೆ ಮಾಡುವುದಾದರೆ ದಯವಿಟ್ಟು ಎಲ್ಲರೂ ಲಾಬಿಗೆ ಹೋಗಿ. ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ. ಇಲ್ಲಿ ಯಾರ್‍ಯಾರು ಕೂಗಾಡುತ್ತಿದ್ದಾರೋ....

(ಗೊಂದಲ)

Mr. Speaker : I don't think they are not under your control now, Mr. Shettar.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ನನ್ನ ಮಾತನ್ನು ಕೇಳುತ್ತೀರೋ ಇಲ್ಲವೋ... ಾಗಿದ್ದರೆ ದಯವಿಟ್ಟು ಎಲ್ಲರೂ ಲಾಬಿಗೆ ಹೋಗಿ, I am requesting all the members) go to lobby. ನೀವು ಅಲ್ಲಿ ಏನಾದರೂ ಮಾತನಾಡಿಕೊಳ್ಳಿ. ದಯವಿಟ್ಟು ಲೌಂಜ್‌ಗೆ ಹೋಗಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಪಾರ್ಟಿಸಿಪೇಟ್ ಮಾಡುವುದಿಲ್ಲವೆಂದರೆ ಹೊರಗಡೆ ಹೋಗಲಿ.

ಶ್ರೀ ಸಿ. ಚನ್ನಿಗಪ್ಪ : ಇದು ಬಹಳ ಜಾಸ್ತಿಯಾಯಿತು.

(ಗೊಂದಲ)

ಅಧ್ಯಕ್ಷರು : 80 ಪರ್ಸೆಂಟ್ ಸದಸ್ಯರಿಗೆ ಡಿಸ್ಟರ್ಬ್ ಮಾಡಿದರೆ ನ್ಯಾಯವಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಅವರಿಗೆ ಇಚ್ಚೆ ಇಲ್ಲವೆಂದರೆ ಹೊರಕ್ಕೆ ಹಾಕಿ.

ಅಧ್ಯಕ್ಷರು : ಅದನ್ನೇ ನಾನು ಹೇಳುತ್ತಿದ್ದೇನೆ. ನಿಮಗೆ ಇಷ್ಟ ಇಲ್ಲದಿದ್ದರೆ ಹೊರಕ್ಕೆ ಹೋಗಿ.

(ಗೊಂದಲ)

Mr. Speaker : I am requesting the members to go to lobby.

(ಗೊಂದಲ)

ಅಧ್ಯಕ್ಷರು : ನಮ್ಮ ಮಾರ್ಶಲ್‌ನ್ನು ಕರೆಸಿ ನಿಮ್ಮನ್ನು ಆಚೆಗೆ ಕಳುಹಿಸಲು ನನಗೆ ಇಷ್ಟವಿಲ್ಲ. ಆದ್ದರಿಂದ ದಯವಿಟ್ಟು ತಾವೇ ದಯವಿಟ್ಟು ಲಾಬಿಯಲ್ಲಿ ಕುಳಿತುಕೊಂಡು ಜೈಕಾರ ಹಾಕಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ,.... ಸ್ವಲ್ಪ ಕೇಳಿ.

(ಗೊಂದಲ)

ಶ್ರೀ ಬಿ. ಸೋಮಶೇಖರ್ : ಬೇರೆಯವರಿಗೆ ಮಾತನಾಡಲು ಅವಕಾಶ ಕೊಡದಿದ್ದರೆ ಹೇಗೆ ?

ಅಧ್ಯಕ್ಷರು : ಅವರು ಮಾತನಾಡಲು ಬಿಡುತ್ತಿಲ್ಲ, ನಾನೇನು ಮಾಡಲಿ ?

(ಗೊಂದಲ)

ಶ್ರೀ ಬಿ. ಸೋಮಶೇಖರ್ : ನಾವು ಮಾತನಾಡುವುದು ಬೇಡವೇ ? ಅರ್ಧ ಗಂಟೆಯಿಂದ ನಾವು ನಿಂತಿದ್ದೇವೆ. ನಾವು ಒಂದು ಜವಾಬ್ದಾರಿ ಪಕ್ಷದಲ್ಲಿದ್ದೇವೆ, ಅಧ್ಯಕ್ಷರು ನಮಗೆ ಮಾತನಾಡಲು ಅವಕಾಶ ಕೊಟ್ಟಿದ್ದಾರೆ.

ಅಧ್ಯಕ್ಷರು : ತಾವು ಮಾತ್ರ ಮಾತನಾಡಬಹುದು ಸೋಮಶೇಖರ್‌ರವರು ಮಾತನಾಡ ಬಾರದೇ ? ಬೇರೆ ವಿರೋಧ ಪಕ್ಷದವರು ಮಾತನಾಡಬಾರದೇ ?

ಶ್ರೀ ಬಿ. ಸೋಮಶೇಖರ್ : ನಮಗೂ ಜವಾಬ್ದಾರಿ ಇದೆ. ನಾವೂ ಇಲ್ಲಿ ಮಾತನಾಡಬೇಕು.

ಅಧ್ಯಕ್ಷರು : ಸೋಮಶೇಖರ್‌ರವರು ಮಾತನಾಡಿ, ಅನಂತರ ಸಿಂಧ್ಯಾರವರು ಮಾತನಾಡಿ.

(ಗೊಂದಲ)

ಅಧ್ಯಕ್ಷರು : ಈ ರೀತಿ ಮಾಡುವುದು ಸರಿಯಲ್ಲ. ಮಾನ್ಯ ಶೆಟ್ಟರ್‌ರವರೇ, ತಮ್ಮ ಸದಸ್ಯರಿಗೆ ಹೇಳುತ್ತೀರೋ ಇಲ್ಲವೋ ? No. I cannot tolerate this. ಈ ರೀತಿ ಮಾಡಿದರೆ ಜನ ಏನೆಂದುಕೊಳ್ಳುತ್ತಾರೆ ? ನೀವೇ ಅವರನ್ನು ಕಂಟ್ರೋಲ್‌ಗೆ ತರದಿದ್ದರೆ ಹೇಗೆ ? ಮಾನ್ಯ ಸೋಮಶೇಖರ್‌ರವರೆ ಹೇಳಿ, ಸೋಮಶೇಖರ್‌ರವರು ಹೇಳಿದ್ದನ್ನು ಮಾತ್ರ ಬರೆದುಕೊಳ್ಳಿ.

ಶ್ರೀ ಬಿ. ಸೋಮಶೇಖರ್ : ಈ ಸದನ ಪ್ರಾರಂಭವಾದ ತಕ್ಷಣ ವಿರೋಧ ಪಕ್ಷ ನಾಯಕರು,

(ಗೊಂದಲ)

ಇದು ಬಹಳ ಅತಿಯಾಯಿತು.. ಇವರದ್ದು ಅತಿಯಾಯಿತು..

ಶ್ರೀ ಆರ್.ವಿ. ದೇಶಪಾಂಡೆ : ವಿರೋಧ ಪಕ್ಷದ ನಾಯಕರು ಬೇರೆಯವರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು, ಇದು ಸರಿಯಲ್ಲ. They should allow others to speak.

(ಗೊಂದಲ)

ಶ್ರೀ ಬಿ. ಸೋಮಶೇಖರ್ : ರೀ, ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

Mr. Speaker : I don't accept the behaviour of B.J.P. Members.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ನೋಡಿ ತೊಗಾಡಿಯಾ ಸಂತತಿ ಹೀಗೆ. ನೋಡಿಸಿಪ್ಲೇನ್. ಇವರೆಲ್ಲಾ ಸಕ್ಸಸರ್ಸ್ . ಅವರಿಗೆ ನೀವು ಮಾತನಾಡಲಿಕ್ಕೆ ಅಲೌ ಮಾಡಿ..

ಶ್ರೀ ಸಿ. ಚನ್ನಿಗಪ್ಪ : ಅವಕಾಶ ಮಾಡಿ ಕೊಡಿ ನಮ್ಮ ಲೀಡರ್‌ಗೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ವಿರೋಧ ಪಕ್ಷದ ನಾಯಕರು.

ಅಧ್ಯಕ್ಷರು : ಸಿಂಧ್ಯಾರವರು, ತಾವು ಮಾತನಾಡಿ.

ಶ್ರೀ ಉಮೇಶ್ ವಿ.ಕತ್ತಿ. : ಮಾನ್ಯ ಅಧ್ಯಕ್ಷರೇ, ಮಾರ್ಷಲ್ ಅವರನ್ನು ಕರೆಸಿ ಇವರನ್ನು ಎತ್ತಿ ಹೊರಗೆ ಹಾಕಿ ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.. ಅವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಮೇಲೆ ನಮಗೆ ಹೇಳುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು : ಅವರಿಗೆ ಮಾತನಾಡಿ ಎಂದು ನಾನು ಹೇಳುತ್ತಿದ್ದೇನಲ್ಲವೆ ?

(ಗೊಂದಲ)

ಶ್ರೀ ಬಿ. ಸೋಮಶೇಖರ್ : ಈ ಗಲಾಟೆಯಲ್ಲಿ ನಾವು ಹೇಗೆ ಮಾತನಾಡುವುದಕ್ಕೆ ಆಗುತ್ತದೆ ? ತಾವು ಯಾವಾಗ ಅವಕಾಶ ಕೊಡುತ್ತೀರಿ.

ಶ್ರೀ ಉಮೇಶ್ ವಿ. ಕತ್ತಿ : ಅವರನ್ನು ಎತ್ತಿ ಹೊರಗೆ ಹಾಕಿ ಸ್ವಾಮಿ.

ಶ್ರೀ ಬಿ. ಸೋಮಶೇಖರ್ : ಕಾನೂನು ರೀತಿ ಏನು ಕ್ರಮ ಕೈಗೊಳ್ಳಬೇಕು ಆ ರೀತಿ ತೆಗೆದುಕೊಳ್ಳಿ. ..... ಕಾನೂನು ಚಲಾಯಿಸಿ.

(ಗೊಂದಲ)

ಅಧ್ಯಕ್ಷರು : ರೀ ಬೆಳ್ಳುಬ್ಬಿಯವರೇ ಸುಮ್ಮನಿರಿ. I have to announce something under Rule 347: "ಸದಸ್ಯರು ಸಭೆಯಿಂದ ಹೊರಕ್ಕೆ ಹೋಗಬೇಕೆಂದು ಆದೇಶ ಮಾಡುವುದು:– ಅಧ್ಯಕ್ಷರು ಯಾವ ಸದಸ್ಯರ ನಡವಳಿಕೆಯು ತುಂಬಾ ಅಸಭ್ಯವಾಗಿದೆಯೆಂದು ಭಾವಿಸುತ್ತಾರೋ, ಅಂಥ ಸದಸ್ಯರಿಗೆ ಸದನದಿಂದ ಕೂಡಲೇ ಹೊರಗೆ ಹೋಗುವಂತೆ ಆದೇಶಿಸಬಹುದು ಮತ್ತು ಆ ರೀತಿ ಹೋಗಬೇಕೆಂದು ಆದೇಶ ಮಾಡಿದ ಯಾರೇ ಸದಸ್ಯರು ಕೂಡಲೇ ಸಭೆಯಿಂದ ಹೊರಗೆ ಹೋಗಬೇಕು ಮತ್ತು ಆ ದಿನದ ಉಪವೇಶನದ ಉಳಿದ ಸಮಯದಲ್ಲಿ ಅವರು ಗೈರು ಹಾಜರಾಗತಕ್ಕದ್ದು." ದಯವಿಟ್ಟು ತಾವು ಎಲ್ಲರೂ ಕೂಗಾಡುತ್ತಿದ್ದೀರಿ, ನೀವು ಒಬ್ಬರೇ ಅಲ್ಲ ವಿರೋಧ ಪಕ್ಷದವರು, ಅವರೂ ಇದ್ದಾರೆ, ಅವರೂ ಸುಮಾರು 35 ಜನ ಇದ್ದಾರೆ, ಇಂಡಿಪೆಂಡೆಂಟ್ಸ್ ಇದ್ದಾರೆ. ಅವರಿಗೂ ಅವಕಾಶ ಕೊಡಬೇಕು, ಜನ ಈ ಬಗ್ಗೆ ನಾಳೆ ಪತ್ರಿಕೆಯಲ್ಲಿ ಓದಿದರೆ ಏನೆಂದುಕೊಳ್ಳುತ್ತಾರೆ. ನಿಮಗೆ ಅರ್ಥವಾಗುವುದಿಲ್ಲವೆ ? ದಯವಿಟ್ಟು ನಿಯಮ 347 ನ್ನು ಓದಿದ್ದೇನೆ ತಾವು ಎಲ್ಲರೂ ಇಲ್ಲಿ ಯಾರ್ಯಾರೂ ಒಳಗಡೆ ನಿಂತಿದ್ದಾರೋ ಅವರೆಲ್ಲರೂ ನಿರ್ಗಮಿಸಬೇಕು. ಇವತ್ತು ಸಭೆ ನಡೆಯುವವರೆವಿಗೂ ತಾವು ಒಳಗಡೆ ಬರಬಾರದು.

ಶ್ರೀ ಪಿ.ಎಸ್. ಅಪ್ಪಾಜಿ ನಾಡಗೌಡ : ತಾವು ನಿಯಮ 347 ರ ಪ್ರಕಾರ ಅವರಿಗೆ ಈ ಮನೆ ಬಿಟ್ಟು ಹೊರಗೆ ಹೋಗಲಿಕ್ಕೆ ಆಜ್ಞೆಯನ್ನು ಕೊಟ್ಟಿದ್ದೀರಿ, ಅವರು ಹೋಗಲಿಲ್ಲವೆಂದರೆ ದಯವಿಟ್ಟು ತಾವು ಅವರನ್ನು ಇಲ್ಲಿಂದ ಎತ್ತಿ ಹಾಕಿಸಬೇಕು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಒಂದ್ನಿಮಿಷ ಸುಮ್ಮನೇ ಇರುವುದಕ್ಕೆ ಹೇಳಿ ನಾವು ಮಾತನಾಡಬೇಕು. ಏಕೆ ಹೀಗೆ ಮಾಡುತ್ತೀರಿ ?

ಅಧ್ಯಕ್ಷರು : ನಾನೇನು ಮಾಡಲಿ ಅವರು ಕೇಳುತ್ತಿಲ್ಲವಲ್ಲಾ. ಏನು ಮಾಡಲಿ ನೀವೇ ಹೇಳಿ. ಹೊರಗೆ ಹೋಗಿ ಎಂದರೂ ಹೋಗುತ್ತಿಲ್ಲವಲ್ಲ. ರೂಲ್ 347 ನ್ನು ಓದಿ ಹೇಳಿದರೂ ಹೋಗುತ್ತಿಲ್ಲವಲ್ಲಾ ಏನು ಮಾಡಲಿ ? ಇವರೇ ವಿರೋಧ ಪಕ್ಷ ಎಂದು ತಿಳಿದುಕೊಂಡು ಬಿಟ್ಟಿದ್ದಾರೆ, ಜನ ನಾಳೆ ಏನೆಂದುಕೊಳ್ಳುತ್ತಾರೆಂದು ನಾಳೆ ಅವರಿಗೇ ಅರ್ಥವಾಗುತ್ತದೆ, ನಾವ್ಯಾಕೆ ಇವತ್ತು ಅವರಿಗೆ ಹೇಳಬೇಕು ? ಯಾರು ಇವತ್ತು ಇಲ್ಲಿ ಅಡಚಣೆ ಮಾಡುತ್ತಿದ್ದಾರೋ ಅವರ ಬಗ್ಗೆ ಏನೆಂದು ಕೊಂಡಿದ್ದಾರೆ ಎಂಬುದು ನಾಳೆ ಅವರಿಗೆ ಗೊತ್ತಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಬೆಳ್ಳುಬ್ಬಿಯವರೇ ನೀವು ಮೊದಲು ಹೊರಗೆ ಹೋಗಿ, ನಿಯಮ 347ನ್ನು ಓದಿ ಹೇಳಿದ್ದೇನೆ ತಾವು ಮೊದಲು ಹೋಗಿ.

(ಗೊಂದಲ)

ಅಧ್ಯಕ್ಷರು : ನಾನು ಅನೌನ್ಸ್ ಮಾಡಿದ್ದೇನೆ, ತಾವು ಎಲ್ಲಾ ಆಚೆಗೆ ನಿರ್ಗಮಿಸಬೇಕು. ಜನ ಏನೆಂದುಕೊಳ್ಳುತ್ತಾರೆ, ನಾಳೆ ಪತ್ರಿಕೆಗಳಲ್ಲಿ ಜನ ಓದಿದರೆ ಏನೆಂದುಕೊಳ್ಳುತ್ತಾರೆ ?

(ಗೊಂದಲ)

ನೀವೇ ಅಲ್ಲ ವಿರೋಧ ಪಕ್ಷ. ಬೇರೆಯವರೂ ಇದ್ದಾರೆ, 347 ನೇ ವಿಧಿ ಪ್ರಕಾರ ನಾನೀಗಾಗಲೇ ಅನೌನ್ಸ್ ಮಾಡಿದ್ದೇನೆ, ದಯವಿಟ್ಟು ಮತ್ತೊಂದು ಸಲ ತಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ, ದಯವಿಟ್ಟು ಇಲ್ಲಿಂದ ನಿರ್ಗಮಿಸಬೇಕೆಂದು ಹೇಳುತ್ತಿದ್ದೇನೆ. ಸ್ವಲ್ಪ ತಡೀರಿ ಅವರೇ ಹೋಗುತ್ತಾರೆ. ತಾವು ದಯವಿಟ್ಟು ಇಲ್ಲಿಂದ ನಿರ್ಗಮಿಸಬೇಕು, ಬೇರೆಯವರಿಗೆ ತೊಂದರೆ ಕೊಡಬೇಡಿ. ನೋಡ್ರಿ ನಾವು ಹೌಸ್ ರನ್ ಮಾಡಬೇಕು. ನೀವು ಡಿಸ್ಟರ್ಬ್ ಮಾಡಬೇಡಿ. ನಮಗೆ ಅದು ಬೇಕಾಗಿಲ್ಲ. 190 ಜನ ಆ ಸೈಡ್ ಇದ್ದಾರೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ದಯವಿಟ್ಟು ನಮಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಇಷ್ಟೊತ್ತೂ ಹೇಳಬೇಕು ಎಂದಿರಿ, ಈಗ ಬೇಡ ಎನ್ನುತ್ತೀರಿ. ಇಷ್ಟೊತ್ತು ಮಾತನಾಡಲಿ ಎಂದವರು ಈಗ ಬೇಡವೆಂದು ಹೇಳುತ್ತಿರಲ್ಲಾ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮಗೂ ಅವಕಾಶ ಕೊಡಿ, ಮಾನ್ಯ ಸಿಂಧ್ಯಾರವರು ಮಾತನಾಡುತ್ತಾರೆ, ಮಾನ್ಯ ಸೋಮಶೇಖರ್ ರವರು ಮಾತನಾಡುತ್ತಾರೆ, ಏಕೆಂದರೆ, ಅವರದ್ದು ನೀವು ಕೇಳಿದಿರಿ, ಮಾನ್ಯ ಶೆಟ್ಟರ್ ರವರು ಅಲ್ಲಿ ನಿಂತುಕೊಂಡು ಏನು ಹೇಳಬೇಕೋ ಅದೆಲ್ಲಾ ಹೇಳಿದ್ದಾರೆ. ನಮಗೂ ಸ್ವಲ್ಪ ಅವಕಾಶಕೊಡಿ.

(ಗೊಂದಲ)

ಅಧ್ಯಕ್ಷರು : ಸ್ವಲ್ಪ ತಾಳಿ ಅವರು ಉತ್ತರ ಹೇಳುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹೀಗಾದರೆ ಹೇಗೆ ? ಮಾತು ಕೇಳುವ ಸೌಜನ್ಯ ಇಲ್ಲವೆಂದರೆ ಹೇಗೆ ? ನಾವೇನು ಹೇಳುತ್ತೇವೆಯೋ ಅದನ್ನು ಮೊದಲು ಕೇಳಲಿ, ನಂತರ.....

ಅಧ್ಯಕ್ಷರು : ರೀ ಸ್ವಾಮಿ, ಅವರೇನು ಹೇಳುತ್ತಾರೆ ಅದನ್ನು ಮೊದಲು ಕೇಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತೊಗಾಡಿಯಾ ಬಂದು ಇವರನ್ನು xxx ಮಾಡುವುದಕ್ಕೆ ಕಳುಹಿಸಿದ್ದಾರೆಯೇ?

---

xxx ಈ ಪದವನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅಧ್ಯಕ್ಷರು : ಅವರೇನು ಹೇಳುತ್ತಾರೆ ಅದನ್ನು ಕೇಳುವುದಕ್ಕೆ ತಾಳ್ಮೆ ನಿಮಗೆ ಇಲ್ಲದಿದ್ದರೆ ಹೇಗೆ ?

(ಗೊಂದಲ)

ಅಧ್ಯಕ್ಷರು : 185 ಜನ ಆ ಕಡೆ ಇದ್ದಾರೆ, ಹೌಸ್ ನಡಸಬೇಕು ಎನ್ನುವುದು 185 ಜನ ಇದ್ದಾರೆ. ಅರ್ಥವಾಯಿತೆ ?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಒಬ್ಬರೇ ಕಂಟ್ರಾಕ್ಟರ್ ಅಲ್ಲ ಹಿಂದೂ ಧರ್ಮದ್ದು, ಬರೇ ಬಿಜೆಪಿಯವರು, ತೊಗಾಡಿಯಾ ಕಂಟ್ರಾಕ್ಟರ್ ಅಲ್ಲ. ಎಲ್ಲರೂ ಇದ್ದಾರೆ.

(ಗೊಂದಲ)

ಅಧ್ಯಕ್ಷರು : ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಿ. I don't like this kind of attitude. 185 ಜನ ಹೌಸ್ ರನ್ ಮಾಡಬೇಕು ಎಂದರೆ, ನೀವು 25 ಜನ ಈ ರೀತಿ ಮಾಡುವುದು ಯಾವ ನ್ಯಾಯ ನೀವೇ ಹೇಳಿ. ಯಾವ ರೂಲ್ಸ್‌ನಲ್ಲಿ ಹೇಳಿದೆ. I take the sense of the House. 185 ಜನ ಹೇಳುತ್ತಿದ್ದಾರೆ. ಈ ರೀತಿ ಹಕ್ಕು ಸಾಧನೆ ಮಾಡುವುದಲ್ಲ.

(ಗೊಂದಲ)

ಅಧ್ಯಕ್ಷರು : ನಿಮ್ಮ ಹಕ್ಕನ್ನು ಈ ರೀತಿಯಾಗಿ ಸಾಧನೆ ಮಾಡತಕ್ಕಂಥದ್ದು ಸರಿಯಲ್ಲ. ಬೇರೆ ವಿರೋಧಪಕ್ಷದವರು ಮಾತನಾಡುವುದಕ್ಕೆ ನೀವು ಅವಕಾಶ ಕೊಡುವುದಿಲ್ಲವೆಂದರೆ ಹೇಗೆ ? ಅವರೂ ಕೂಡ ವಿರೋಧಪಕ್ಷದವರಾಗಿರುವುದರಿಂದ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಜನ ಇದನ್ನು ಮೆಚ್ಚುವುದಿಲ್ಲ. ತಾವುಗಳು ಇದನ್ನು ತಿಳಿದುಕೊಳ್ಳಬೇಕು.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೆ, ಅವರನ್ನು ಹೊರಕ್ಕೆ ಹಾಕಿ.

(ಗೊಂದಲ)

ಅಧ್ಯಕ್ಷರು : ಬೇರೆಯವರು ಮಾತನಾಡುವುದಕ್ಕೆ ಅವಕಾಶ ಕೊಡಿ. ಆನಂತರ ಸರ್ಕಾರದವರು ಏನು ಉತ್ತರ ಕೊಡುತ್ತಾರೆ ಅದನ್ನಾದರೂ ಕೇಳಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇಂಥ ಪ್ರಜೋದನಾಕಾರಿ ಭಾಷಣ ಮಾಡುವಂಥದ್ದೆಲ್ಲಾ ಏನು ? What is this.

(ಗೊಂದಲ)

ಅಧ್ಯಕ್ಷರು : ಇನ್ನು 180 ಜನರು ಇಲ್ಲಿದ್ದಾರೆ. This is not democracy. ಪ್ರಜಾಪ್ರಭುತ್ವವಲ್ಲ. ಇದನ್ನು ನಾನೂ ಸಹ ಒಪ್ಪುವುದಿಲ್ಲ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ನಾನು ಹೇಳತಕ್ಕಂಥದ್ದನ್ನು ಸ್ವಲ್ಪ ಕೇಳಿ. ನಾನು ತಮಗೆ ಇನ್ನೊಂದು ಚಾನ್ಸ್ ಕೊಡುತ್ತೇನೆ. ಈಗ ಸದನವನ್ನು 15 ನಿಮಿಷ ಮುಂದೂಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಈಗ ಸದನವನ್ನು ಅಡ್ಜರ್ನ್ ಮಾಡಿ.

(ಸದನವು 12 ಗಂಟೆ 1 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 15 ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು)

(ಸದನ ಪುನಃ 1-10 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರು ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

(ಬಿ.ಜೆ.ಪಿ ಸದಸ್ಯರುಗಳು ಬಾವಿಯಲ್ಲಿ)

ವಿಷಯ: ಶ್ರೀ ಪ್ರವೀಣ್ ಭಾಯ್ ತೊಗಾಡಿಯಾರವರಿಗೆ ಬಿಜಾಪುರ ಪ್ರವೇಶ ನಿರ್ಬಂಧ ವಿಧಿಸಿರುವ ಬಗ್ಗೆ (ಮುಂದು)

ಅಧ್ಯಕ್ಷರು : ಖರ್ಗೆಯವರೇ, ತಾವು ಏನಾದರೂ ಇದ್ದರೆ ಹೇಳುತ್ತೀರಾ ದಯಮಾಡಿ ಎಲ್ಲರೂ ಸುಮ್ಮನೆ ಇರಬೇಕು.

(ಗೊಂದಲ)

ಅಧ್ಯಕ್ಷರು : ನೀವು ನಲ್ವತ್ತು ಜನ ಸದಸ್ಯರುಗಳು ಆಚೆ ಹೋಗಬೇಕೆಂದು ನಾನು ಹೇಳಿದ್ದೇನೆ. ನಿಮ್ಮ ಈ ರೀತಿಯ ನಡವಳಿಕೆಯನ್ನು ನಾನು ಇಷ್ಟಪಡುವುದಿಲ್ಲ. 185 ಜನ ಒಂದು ಕಡೆ ಇದ್ದಾರೆ, ಅವರು ಸಭೆಯನ್ನು ನಡೆಸಬೇಕೆಂದು ಇದ್ದಾರೆ. ಇದು ಯಾವ ನ್ಯಾಯ ? ಇದು ಯಾವ ಪ್ರಜಾಪ್ರಭುತ್ವ ಎಂದು ನೀವೇ ಹೇಳಿ. 185 ಜನ ಸಭೆ ನಡೆಸಬೇಕೆಂದು ಹೇಳುತ್ತಿದ್ದಾರೆ.

(ಗೊಂದಲ. ಬಾವಿಯಲ್ಲಿದ್ದ ಸದಸ್ಯರುಗಳು ಘೋಷಣೆಗಳನ್ನು ಕೂಗುತ್ತಿದ್ದರು. ಶ್ರೀ ವಿಶ್ವೇಶ್ವರ ಹೆಗಡೆಯವರು ಜೋರಾಗಿ ಮಾತನಾಡಿದರು)

ಅಧ್ಯಕ್ಷರು : ಹೀಗೆ ಮಾಡಿದರೆ ಆಗುವುದಿಲ್ಲ. Mr. Hegde, you please go out. ಕರೆದುಕೊಂಡು ಹೋಗಿರಿ ಅವರನ್ನು. ಹೆಗಡೆಯವರನ್ನು ಆಚೆ ಕಳಿಸಿ.

(ಗೊಂದಲ)

ಅಧ್ಯಕ್ಷರು : ಯಾವ ಪ್ರಜಾಪ್ರಭುತ್ವಾರೀ ಇದು ? 185 ಜನ ಹಾಗೂ ನಿಮ್ಮ ಹಾಗೆ ವಿರೋಧ ಪಕ್ಷದಲ್ಲಿದ್ದವರೂ ಇದ್ದಾರೆ, ಅವರೂ ಮಾತನಾಡುವುದಕ್ಕೆ ನೀವು ಬಿಡುತ್ತಾ ಇಲ್ಲ.

(ಗೊಂದಲ)

ಅಧ್ಯಕ್ಷರು : ನೋಡಿ, ಹೆಗಡೆಯವರನ್ನು ಆಚೆಗೆ ಕಳುಹಿಸಿ.

(ಗೊಂದಲ)

ಅಧ್ಯಕ್ಷರು : ನೋಡಿ, 185 ಜನ ಒಂದು ಕಡೆ ಸಭೆ ನಡೆಯಬೇಕೆಂದು ಇದ್ದಾರೆ. ನಿಮ್ಮ ಹಾಗೆ ಅವರೂ ವಿರೋಧಪಕ್ಷದಲ್ಲಿ ಇದ್ದಾರೆ. ಅರ್ಥವಾಯಿತಾ ?

(ಗೊಂದಲ)

ಅಧ್ಯಕ್ಷರು : ಹೆಗಡೆಯವರೇ, you please stop.

(ಗೊಂದಲ)

(ಬಿ.ಜೆ.ಪಿ. ಸದಸ್ಯರುಗಳಿಂದ ಘೋಷಣೆ, ಕೂಗಾಟ)

ಶ್ರೀ ಆರ್.ವಿ. ದೇಶಪಾಂಡೆ : ಅಧ್ಯಕ್ಷರೆ, ಅವರು ವೆಲ್‌ನಿಂದ ಮಾತನಾಡುತ್ತಿದ್ದಾರೆ. Nothing should go on record.

XXX

(ಗೊಂದಲ)

XXX ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅಧ್ಯಕ್ಷರು : ಖರ್ಗೆಯವರೇ, ನೀವು ಏನಾದರೂ ಹೇಳುವುದು ಇದ್ದರೆ ಹೇಳಿ. ಮಾನ್ಯ ಖರ್ಗೆಯವರು ಹೇಳಿದ್ದು ಮಾತ್ರ ಬರೆದುಕೊಳ್ಳಿ. ವೆಲ್‌ನಿಂದ ಯಾರು ಮಾತನಾಡುತ್ತಿದ್ದಾರೆ, ಅವರು ಏನೂ ಮಾತನಾಡಿದರೂ ಅದು ರೆಕಾರ್ಡಿಗೆ ಹೋಗುವುದಿಲ್ಲ. ಮಾನ್ಯ ಖರ್ಗೆಯವರು ಮಾತನಾಡಿದ್ದನ್ನು ಮಾತ್ರ ಬರೆದುಕೊಳ್ಳಿ. ಯಾವುದು ಪಾರ್ಲಿಮೆಂಟರಿ, ಯಾವುದು ಅನ್ ಪಾರ್ಲಿಮೆಂಟರಿ ಎಂಬುದನ್ನು ನಾನು ನೋಡುತ್ತೇನೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಈಗ ಅವರು ಮಾತನಾಡಿದ್ದನ್ನು ನಾವು ಕೇಳಿದ್ದೇವೆ. ಇವರಿಗೆ ಏನೂ ಬೇಕಾಗಿಲ್ಲ. ಅಧ್ಯಕ್ಷರೇ, ಗಾಂಧೀಜಿಯವರನ್ನು ಕೊಲೆ ಮಾಡಿದಂಥವರು ....

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮ್ಮ ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಯಾವುದೇ ಅಹಿತಕರ ಘಟನೆ ನಡೆದಿಲ್ಲ. ಕೋಮು ಘರ್ಷಣೆ ನಮ್ಮ ರಾಜ್ಯದಲ್ಲಿ ಆಗಿಲ್ಲ. ಈಗ ಇಡೀ ದೇಶದಲ್ಲೇ ಇದಕ್ಕೆ ಪ್ರಚೋದನೆ ನೀಡುವುದಕ್ಕೆ ಚುನಾವಣೆ ದೃಷ್ಟಿಯಿಂದ ಈ ತರಹ ಮಾಡುತ್ತಿದ್ದಾರೆ.

(ಗೊಂದಲ)

+**ಶ್ರೀ ಮಲ್ಲಿಕಾರ್ಜುನ ಖರ್ಗೆ** : ಅಧ್ಯಕ್ಷರೆ, ಇದರ ಜೊತೆಗೆ ಇವರು ಇಲ್ಲಿ ಸಮಯವನ್ನು ಹಾಳುಮಾಡುತ್ತಿದ್ದಾರೆ. ಇದು ಸರಿಯಲ್ಲ. ತೊಗಾಡಿಯಾ ಅವರೇನು ಮಹಾದೊಡ್ಡ ದೇಶಭಕ್ತ, ದೊಡ್ಡ ಸ್ವಾತಂತ್ರ್ಯ ವೀರರೇನೂ ಅಲ್ಲ. ಮೊನ್ನೆ ಮೊನ್ನೆ ಹುಟ್ಟಿ ಕಣ್ಣು ತೆರೆದು ಸಮಾಜವನ್ನು ಒಡೆಯತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆಯೇ ಹೊರತು ಸಮಾಜವನ್ನು ಕಟ್ಟತಕ್ಕಂಥ ಕೆಲಸ ಮಾಡುತ್ತಿಲ್ಲ. ಇಡೀ ದೇಶವನ್ನು ಒಡೆಯತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆಯೇ ಹೊರತಾಗಿ ದೇಶದಲ್ಲಿ ಐಕ್ಯಮತ್ಯತೆ ತರತಕ್ಕಂಥ ಕೆಲಸ ಮಾಡುತ್ತಿಲ್ಲ. ಇವತ್ತು ತಮಗೆ ಗೊತ್ತಿದೆ, ಇವರು ದೇಶದ ಮೂಲೆಮೂಲೆಗೆ ಹೋಗಿ ಭಾಷಣ ಮಾಡುತ್ತಿದ್ದಾರೆ. ಏತಕ್ಕೋಸ್ಕರ ? ಕೇವಲ ಸಮಾಜವನ್ನು ಒಡೆಸತಕ್ಕಂಥ ತಂತ್ರವನ್ನು ಮಾಡುತ್ತಿದ್ದಾರೆ. ಅಂತಹವರಿಗೆ ಇವರು ಬೆಂಬಲವನ್ನು ಕೊಡುತ್ತಿದ್ದಾರೆ. ಅದಕ್ಕಾಗಿ ನಾನು ಹೇಳುತ್ತೇನೆ ಏನೆಂದರೆ ಯಾರು ಅಂತಹ ವ್ಯಕ್ತಿಗಳಿಗೆ ಬೆಂಬಲವನ್ನು ನೀಡುತ್ತಾರೆ, ಅದರ ಬಗ್ಗೆ ಇವರಿಗೆ ನಾಚಿಕೆ ಬರಬೇಕು. ಇಂತಹ ವ್ಯಕ್ತಿಗಳಿಗೆ, ಇಂತಹ ಸಮಾಜ ವಿರೋಧಿ ಶಕ್ತಿಗಳಿಗೆ ಬೆಂಬಲ ಕೊಡತಕ್ಕಂಥ ಜನ ಇವತ್ತು ಈ ರೀತಿ ನಡೆದುಕೊಂಡರೆ, ಖಂಡಿತವಾಗಿ ನಾನು ಹೇಳುತ್ತೇನೆ, ಅಧ್ಯಕ್ಷರೇ, ಇದು ಒಳ್ಳೆಯದಲ್ಲ. ಇವತ್ತಿನ ದಿವಸ ದೇಶದಲ್ಲಿ ಈ ರೀತಿಯಾಗಿ ಏನು ನಡೆದಿದೆ, ಇದರಿಂದ ಏನಾಗುತ್ತದೆ ಎಂದರೆ ನಾವೆಲ್ಲರೂ ಸೇರಿ ಇಂತಹ ಶಕ್ತಿಗಳಿಗೆ ಪ್ರೋತ್ಸಾಹ ಕೊಟ್ಟಹಾಗೆ ಆಗುತ್ತದೆ. ಅದಕ್ಕಾಗಿ ದೇಶದಲ್ಲಿ ಶಾಂತಿ ಇರಬೇಕು, ರಾಜ್ಯದಲ್ಲಿ ಶಾಂತಿ ಇರಬೇಕು ಮತ್ತು ನಾವೆಲ್ಲರೂ ಕೂಡ ಐಕ್ಯಮತ್ಯತೆ ಭಾವನೆಯಿಂದ ನಡೆದುಕೊಳ್ಳಬೇಕು ಎಂದರೆ ಇಂತಹ ಶಕ್ತಿಗಳನ್ನು ಹತ್ತಿಕ್ಕಬೇಕು. ಮತ್ತು ಇಂತಹ ಶಕ್ತಿಗಳಿಗೆ ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲ, ಅವರು ರಾಜ್ಯದ ಯಾವ ಭಾಗದಲ್ಲೂ ಹೋಗಲಾಗದಂಥ ಕೆಲಸ ಇವತ್ತು ಆಗಬೇಕಾಗಿದೆ. ಇವತ್ತು ನಮ್ಮ ರಾಜ್ಯ ಅನೇಕ ರೀತಿಯಿಂದ ಸಹಿಸಿಕೊಂಡು ಹೋಗಿದೆ. ಅನೇಕ ರೀತಿಯಿಂದ ಎಲ್ಲರೂ ಕಾನ್ಫರೆನ್ಸ್ ಮುಂತಾದವುಗಳನ್ನು ಮಾಡಿದ್ದಾರೆ. ಮಾನ್ಯ ಅದ್ವಾನಿಯವರು ಅನೇಕ ಸಲ ಬಂದು ಭಾಷಣ ಮಾಡಿದ್ದಾರೆ. ಆಗ ನಾವು ಯಾವುದೇ ಪ್ರಾಹಿಬಿಟರಿ ಆರ್ಡರ್ ಹಾಕಲಿಲ್ಲ. ಮಾನ್ಯ ವಾಜಪೇಯಿಯವರು ಬಂದು ಭಾಷಣ ಮಾಡಿದ್ದರು. ಬಿ.ಜೆ.ಪಿ. ಪಕ್ಷದವರು ಅನೇಕ ಸಲ

ಇಲ್ಲಿ ಕಾನ್ಫರೆನ್ಸ್ ಮತ್ತು ಮೀಟಿಂಗ್‌ಗಳನ್ನು ಮಾಡಿದಾಗ ಎಂದೂ ಕೂಡ ಪ್ರತಿಬಂಧಕಾಜ್ಞೆಯನ್ನು ನಾವು ಮಾಡಿಲ್ಲ. ಆರ್.ಎಸ್.ಎಸ್. ನವರ ರ್ಯಾಲಿ ಮಾಡಿದಾಗಲೂ ಪ್ರತಿಬಂಧ ಮಾಡಿಲ್ಲ. ಆದರೆ ಇಂತಹ ಕಿಡಿಗೇಡಿಗಳು ಬಂದಾಗ ನಾವು ಅವರಿಗೆ ಬಂದೋಬಸ್ತು ಮಾಡಬೇಕಾಗುತ್ತದೆ. ಇಂತಹವರನ್ನು ಹದ್ದುಬಸ್ತಿನಲ್ಲಿಡಬೇಕಾಗುತ್ತದೆ. ಅದಕ್ಕೆ ಇವತ್ತು ನಮ್ಮ ಮೇಲೆ ಗೂಬೆ ಕೂಡಿಸುವ ಪ್ರಯತ್ನ ಮಾಡುತ್ತಿದ್ದಾರೆ. ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಅಂತಹ ಶಕ್ತಿಗಳ ವಿರುದ್ಧ ಎಲ್ಲರೂ ಕೂಡ ಹೋರಾಟ ಮಾಡಬೇಕಾಗಿದೆ. ಈ ಸದನದಲ್ಲಿರತಕ್ಕಂಥ ಪ್ರತಿಯೊಬ್ಬ ಸದಸ್ಯರೂ ಕೂಡ ಇವತ್ತು ನಮ್ಮ ಒಂದು ಜಿಲ್ಲಾಧಿಕಾರಿಗಳು ಏನು ಸ್ಟ್ಯಾಂಡ್‌ನ್ನು ತೆಗೆದುಕೊಂಡಿದ್ದಾರೆ, ಆ ಸ್ಟಾಂಡ್‌ಗೆ ಇಡೀ ಸದನ ಬೆಂಬಲ ಕೊಡುತ್ತದೆ ಎಂದು ಹೇಳಿ ನಾನು ಭಾವಿಸುತ್ತೇನೆ. ನಾನು ಇಷ್ಟು ಮಾತ್ರ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ನಾವು ಎಲ್ಲವನ್ನೂ ಹೇಳುವುದಕ್ಕೆ ತಯಾರಿದ್ದೇವೆ. ಆದರೆ ಅವರು ಯಾವುದೇ ರೀತಿಯಿಂದ ಕೇಳುವುದಕ್ಕೆ ತಯಾರಿಲ್ಲ. ಅದಕ್ಕಾಗಿ ನಾನು ಇಷ್ಟು ಮಾತ್ರ ತಮ್ಮಲ್ಲಿ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ. ದೇವರು ಅವರಿಗೆ ಸದ್ಬುದ್ಧಿ ಕೊಡಲಿ, ದೇಶಕ್ಕೆ ಒಳ್ಳೆಯದು ಮಾಡತಕ್ಕಂಥ ಭಾವನೆ ಅವರಲ್ಲಿ ಬರಲಿ, ದೇಶದಲ್ಲಿ ಐಕ್ಯಮತ್ಯ ಇರತಕ್ಕಂಥ ಭಾವನೆ ಬರಲಿ ಮತ್ತು ಗಾಂಧೀಜಿ ಅವರಂಥ ಜನ ನಮ್ಮ ದೇಶದಲ್ಲಿ ಹುಟ್ಟಲಿ, ಈ ತೊಗಾಡಿಯಾ ಅಂಥವರು, ಗೋಡ್ಸೆ ಅವರಂಥ ಸಂತತಿ ನಶಿಸಿಹೋಗಲಿ ಎನ್ನತಕ್ಕಂಥ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಜಗದೀಶ ಶೆಟ್ಟರ್‌ರವರೇ, ಸ್ವಲ್ಪ ದಯವಿಟ್ಟು ಸುಮ್ಮನೆ ಇರಿ....

(ಗೊಂದಲ)

ಅಧ್ಯಕ್ಷರು : ನಾವುಗಳು ಸ್ವಲ್ಪ ಸುಮ್ಮನೆ ಇರುತ್ತೀರಾ ? ಮಾನ್ಯ ಜಗದೀಶ ಶೆಟ್ಟರ್ ರವರೇ, ತಾವೇ ಹೀಗೆ ಮಾಡುತ್ತಿದ್ದರೆ ಹೇಗೆ ?

(ಗೊಂದಲ)

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ತಾವು ತಮ್ಮ ರೂಲಿಂಗ್ ಕೊಟ್ಟ ಮೇಲೆ ಅವರನ್ನು ಹೊರಗಡೆ ಕಳುಹಿಸಿ. ಈ ಸಭೆ ನಡೆಯುವುದಕ್ಕೆ ಅವಕಾಶ ಮಾಡಿ ಕೊಡಬೇಕು.

(ಗೊಂದಲ)

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೇ, ತಾವು ದಯವಿಟ್ಟು ಅವರನ್ನು ಹೊರಗೆ ಹಾಕಿ, ಇದು ಬಹಳ ಅನ್ಯಾಯ.

(ಗೊಂದಲ)

ಅಧ್ಯಕ್ಷರು : ಬೆಳಿಗ್ಗೆ 10–45 ಗಂಟೆಯಿಂದ ಇದು ಪ್ರಾರಂಭವಾಗಿದೆ. ಈಗ ಸಮಯ 1–20 ಇದುವರೆಗೂ ನಾವು ಎಷ್ಟೇ ಸಮಾಧಾನ ಮಾಡಿದರೂ ಸಹ ಇವರು ಕೇಳುತ್ತಿಲ್ಲ. ಇದು ಪ್ರಜಾಪ್ರಭುತ್ವ, ಇಲ್ಲಿ ಇತರೆ ಸದಸ್ಯರು ಸುಮಾರು 185 ಜನ ಇದ್ದಾರೆ. ಅವರ ಹಕ್ಕಿಗೆ ಅಡಚಣೆ ಮಾಡುವುದು ಯಾವ ನ್ಯಾಯ ? ಇದು ಯಾವ ಪ್ರಜಾಪ್ರಭುತ್ವ ಎಂದು ನಾನು ತಮ್ಮನ್ನು ಕೇಳುತ್ತೇನೆ ಇದು ಯಾವ ನ್ಯಾಯ ? ಇದು ಯಾವ ಪ್ರಜಾಪ್ರಭುತ್ವ ? ರಾಜ್ಯಾಂಗದತ್ತವಾದ ಹಕ್ಕು ಈ 185 ಜನ ಸದಸ್ಯರಿಗೂ ಇದೆ. ತಾವು ಅವರ ಹಕ್ಕನ್ನು ಮೊಟಕು ಮಾಡುತ್ತಿದ್ದೀರಿ. ಇತರೇ ವಿರೋಧಪಕ್ಷದ ಸದಸ್ಯರಿಗೆ ತಾವು

ಅಲೋ ಮಾಡುತ್ತಿಲ್ಲ. ಇದು ಏನು ? I cannot understand. ನೋಡಿ, ಜನ ನಿಮ್ಮನ್ನು ಮೆಚ್ಚುವುದಿಲ್ಲ. ಜನ ನಿಮ್ಮನ್ನು ಮೆಚ್ಚುವುದಿಲ್ಲ ತಿಳಿದುಕೊಳ್ಳಿ. ಅರ್ಥವಾಯಿತೇ ? ದಯವಿಟ್ಟು ಸ್ವಲ್ಪ ಸುಮ್ಮನೆ ಇರಿ.

(ಗೊಂದಲ)

ಅಧ್ಯಕ್ಷರು : ನಾವು ಸುಮಾರು ಎರಡೂವರೆ ಗಂಟೆಯವರೆಗೂ ನೋಡಿದ್ದೇವೆ. ಇನ್ನು ಇವರು ಸದನವನ್ನು ನಡೆಸಲು ಬಿಡುವ ಪರಿಸ್ಥಿತಿಯಲ್ಲಿ ಇಲ್ಲ. ನಾನು ಸಭೆಯನ್ನು ನಡೆಸುವುದಕ್ಕೆ ಇವರು ಬಿಡುತ್ತಿಲ್ಲ. ಸಭೆಯನ್ನು ನಡೆಸುವುದಕ್ಕೆ ಬಿಡುತ್ತಿಲ್ಲ. ಅರ್ಥವಾಯಿತೇ ಆಮೇಲೆ ಬೇರೆ ಪಕ್ಷದವರು ಮಾತನಾಡುವುದಕ್ಕೂ ಇವರು ಬಿಡುತ್ತಿಲ್ಲ. ಇದು ಯಾವ ನ್ಯಾಯ ? ಇದು ಯಾವ ಪ್ರಜಾಪ್ರಭುತ್ವ ? ಇದು ಯಾವ ಡೆಮೊಕ್ರಸಿ ? I cannot understand. ದಯವಿಟ್ಟು.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಸುಮ್ಮನೆ ಇರಿ. ನಾನು ಈ ಸಭೆಯನ್ನು ಪ್ರಜಾಪ್ರಭುತ್ವದ ರೀತಿಯಲ್ಲಿ ಅಥವಾ ಈ ಸಭೆಯ ನಿಯಮಾವಳಿಗಳ ಪ್ರಕಾರ ನಡಸಲು ಆಗುತ್ತಿಲ್ಲ. ದಯವಿಟ್ಟು ತಾವು ಅರ್ಥ ಮಾಡಿಕೊಳ್ಳಬೇಕು. ತಾವು ಅರ್ಥಮಾಡಿಕೊಳ್ಳದಿದ್ದರೆ ಹೇಗೆ ? 10 ಗಂಟೆ 45 ನಿಮಿಷದಿಂದ ಒಂದೂವರೆಗಂಟೆಯವರೆಗೂ ಇದೇ ರೀತಿ ಆಗುತ್ತಿದೆ. ಇದು ಯಾವ ನ್ಯಾಯ ? ಇಲ್ಲಿ 185 ಜನ ಶಾಸಕರು ಇತರರು ಕುಳಿತುಕೊಂಡಿದ್ದಾರೆ. ವಿರೋಧ ಪಕ್ಷದ ಸದಸ್ಯರು ಇರೆಯವರು ಇದ್ದಾರೆ. ಅವರೂ ಮಾತನಾಡಲು ತಾವು ಬಿಡುತ್ತಿಲ್ಲ. ಜನತೆ ನಿಮ್ಮನ್ನು ಮೆಚ್ಚುವುದಿಲ್ಲ ಎಷ್ಟನೇ ಹೇಳುತ್ತಿದ್ದೇನೆ...

(ಗೊಂದಲ)

ಅಧ್ಯಕ್ಷರು : ಅದಕ್ಕೊಸ್ಕರ ಈಗ ಸದನವನ್ನು ಸೋಮವಾರ ಬೆಳಿಗ್ಗೆ 11-00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 1-24 ಗಂಟೆಗೆ ಮುಂದೂಲ್ವಟ್ಟು ಪುನಃ ದಿನಾಂಕ: 28-7-03 ಸೋಮವಾರ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

+ ಈ ಚಿನ್ಹೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.